`ಸಿ' ವೃಂದದ ಸಿಬ್ಬಂದಿಗಳನ್ನು `ಬಿ' ವೃಂದಕ್ಕೆ ಉನ್ನತೀಕರಿಸಿರುವ ಬಗ್ಗೆ

ಡಾ|| ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :-

32 (111) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಡಾ:ಬಿ.ಆರ್, ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ `ಸಿ' ವೃಂದದ ಸಿಬ್ಬಂದಿಗಳನ್ನು `ಬಿ' ವೃಂದದ ಅಧಿಕಾರಿಗಳನ್ನಾಗಿ ಉನ್ನತೀಕರಣಗೊಳಿಸಲಾಗಿದೆಯೇ; ಈ ಉನ್ನತೀಕರಣ ಕೈಗೊಳ್ಳಲು ಕಾರಣವೇನು; (ಉನ್ನತೀಕರಣಗೊಂಡ ಅಧಿಕಾರಿ/ಸಿಬ್ಬಂದಿಗಳ ವಿವರ ನೀಡುವುದು)

(ಆ) ಈ ಉನ್ನತೀಕರಣಕ್ಕೆ ಅನುಸರಿಸಲಾದ ಮಾನದಂಡಗಳೇನು; ಇದಕ್ಕೆ ಸರ್ಕಾರದಿಂದ ಅನುಮತಿ ಪಡೆಯಲಾಗಿದೆಯೇ; ಇದ್ದಲ್ಲಿ, ಮಾನದಂಡ ಮತ್ತು ಅನುಮತಿಯ ಪ್ರತಿಗಳನ್ನು ನೀಡುವುದು;

(ಇ) ಉನ್ನತೀಕರಣಗೊಂಡ `ಬಿ' ವೃಂದದ ಅಧಿಕಾರಿಗಳಿಗೆ ನಿಗಮದಿಂದ ನಿಗಧಿಪಡಿಸಿರುವ ವಿದ್ಯಾರ್ಹತೆ, ಷರತ್ತು ಅಥವಾ ನಿಬಂಧನೆಗಳೇನು; (ಪ್ರತಿ ನೀಡುವುದು)

(ಈ) ಈ ಉನ್ನತೀಕರಣಕ್ಕೆ ನಿಗಮದ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ತಿದ್ದುಪಡಿ ಮಾಡಲಾಗಿದೆಯೇ; ಇದ್ದಲ್ಲಿ, ಸಿ & ಆರ್ ನಿಯಮಗಳ ಪ್ರತಿ ನೀಡುವುದು;

(ಉ) ಉನ್ನತೀಕರಣದಲ್ಲಿ ಜ್ಯೇಷ್ಠತೆಯನ್ನು ಪಾಲನೆ ಮಾಡಲಾಗಿದೆಯೇ;

(ಊ) ಉನ್ನತೀಕರಣಗೊಂಡ `ಬಿ' ವೃಂದದ ಅಧಿಕಾರಿಗಳು ನಿಗಮದ ಷರತ್ತು ಅಥವಾ ನಿಬಂಧನೆಯನ್ವಯ ಕಾರ್ಯನಿರ್ವಹಿಸುತ್ತಿದ್ದಾರೆಯೇ; ಇದ್ದಲ್ಲಿ, ಅಂತಹ ವಿವರ ಮತ್ತು ಇಲ್ಲದಿದ್ದಲ್ಲಿ, ಅಂತಹವರ ವಿವರ ಹಾಗೂ ಷರತ್ತು ಉಲ್ಲಂಘಿಸಿ ಕರ್ತವ್ಯ ನಿರ್ವಹಿಸುತ್ತಿರುವುದಕ್ಕೆ ಕಾರಣ ಸಮೇತ ವಿವರ ನೀಡುವುದು?